ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Monday, 2nd March 1970

The House met in the Assembly Chamber, Vidhana Soudha, Bangalore, at One of the Clock.

MR. DEPUTY SPEAKER (SRI D. MANJUNATH) in the Chair.

STARRED QUESTIONS

(to which oral answers were given)

Construction of a Tank at Muthaganahalli, Molakalmuru Taluk

279. **Sri H. SIDDAVEERAPPA** (Harihar).—

Will the Minister of State for Minor Irrrigation be pleased to state :—

(*a*) whether a construction Company called the 'Karnatak Construction Company' had entered into a contract with the Government in the Public Works Department for constructing a new tank at Muthaganahalli (Molakalmuru Taluk) estimated to cost Rs. 3 lakhs ;

(*b*) whether such a tank breached even before its completion ;

(*c*) the amount paid to the said Company (Information up to a latest convenient date be furnished) ;

(*d*) the steps the Government has taken to recover the losses from the said Company ?

Sri A. J. DODDAMETI (Minister of State for Minor Irrigation).—

(*a*) The work has been entrusted to M/s. Karnatak Traders, Chitradurga.

(*b*) Yes.

(*c*) Rs. 2,09,974-00.

(*d*) The work of closing the breach is being attended to by the Contractor at his own cost, hence the question of recovery of cost of loss to Government does not arise.

ಶ್ರೀ ಎಚ್. ಸಿದ್ದವೀರಪ್ಪ.—ಇದು ಯಾತಕ್ಕೋಸ್ಕರ ಒಡೆದುಹೋಯಿತು ಎನ್ನುವುದನ್ನು ಹೇಳಬಲ್ಲಿರಾ?

†ಶ್ರೀಮತಿ ಬನವರಾಜೇಶ್ವರಿ.—ಮಳೆ ಹೆಚ್ಚಾಗಿ ಬಂದುದರಿಂದ ಒಡೆದು ಹೋಗಿದೆ ಎಂದು ಹೇಳಿದ್ದಾರೆ. ಆದಾಗ್ಯೂ ಕೂಡ ಚೀಫ್ ಇಂಜಿನೀಯರವರು ತಾರೀಖು 29ನೇ ಏಪ್ರಿಲ್ 1967 ರಲ್ಲಿ ಇನ್‌ಸ್ಪೆಕ್ಷನ್ ಮಾಡಿ ಆ ರೀತಿ ಒಡೆದು ಹೋಯಿತು ಎಂದು ಅಭಿಪ್ರಾಯ ಪಟ್ಟಿದ್ದಾರೆ.

"A new tank with an estimated cost of Rs. 3.68 lakhs was taken up during 1962–63 and an expenditure of about Rs. 2.41 lakhs has already been incurred on the bund work. The water was also stored during 1968 and it has breached near the right sluice. The main reason for the breach appears to be due to piping action near the sluice. Had proper care been taken to provide puddle and proper bond between masonry and earthwork, the breach could have been prevented. It was stated during the time of the breach that the tank was full and sweating was observed on the left side of the breached portion. Since the excavated stuff was dumped about 100' away on the rear toe of the bund and there was no gap for the flood water to flow, the flood water is taken parallel to the rear toe and it has secured the bund work already done to some extent.

The breach near the sluice has to be closed by providing proper cut-off up to 1/2 F. S. D. hearting, casing, etc. The barrel for the sluice portion already constructed has to be dismantled since it is not up to required standard and instead C. I. pipe has to be provided with proper masonry cross walls, etc. The secured portion on the left flank in the grades of 10 to 17 will have to be redone by providing proper slope, etc. The cost on the above work will have to be borne by the contractor and work should be completed before the onset of monsoon."

Sri H. SIDDAVEERAPPA.—Who are the partners of this firm?

Smt. BASAVARAJESWARI.—M/s. Karnatak Construction Co.

ಶ್ರೀ ಎಚ್. ಸಿದ್ದವೀರಪ್ಪ.—ಕರ್ಣಾಟಕ ಕನ್‌ಸ್ಟ್ರಕ್ಷನ್ ಕಂಪನಿ ಗುರುನಾಥ ಮತ್ತು ರಾಜಶೇಖರ ಇರುವ ಕಂಪನಿಯೆ?

ಶ್ರೀಮತಿ ಬನವರಾಜೇಶ್ವರಿ.—ಇಲ್ಲ, ಹೆಸರುಗಳು ಏನೂ ಕೊಟ್ಟಿಲ್ಲ. ಅವರು ಹೇಳತಕ್ಕದ್ದು ಕರ್ಣಾಟಕ ಏಜೆನ್ಸಿ ಸಂಬಂಧವಾಗಿ.

ಶ್ರೀ ಎಚ್. ಸಿದ್ದವೀರಪ್ಪ.—ಪಾರ್ಟ್‌ನರ್ಸ್ ಯಾರು ?

ಶ್ರೀಮತಿ ಬನವರಾಜೇಶ್ವರಿ.—ಪಾರ್ಟ್‌ನರ್ಸ್ ಯಾರು ಎಂದು ಹೆಸರು ಕೊಟ್ಟಿಲ್ಲ. ಆದರೆ ಮಾನ್ಯ ಸದಸ್ಯರು ಹೇಳತಕ್ಕದ್ದು, ನಾನು ಹೇಳತಕ್ಕದ್ದು ಒಂದೇ ಕಂಪನಿ.

ಶ್ರೀ ಎಚ್. ಸಿದ್ದವೀರಪ್ಪ.—ಈ ರೀತಿ ಕರ್ಣಾಟಕ ಟ್ರೇಡರ್ಸ್ ಅಂದರೆ ಮೆಸರ್ಸ್ ಗುರುನಾಥ ರಾಜಶೇಖರ ಕಂಪನಿಯವರು ಎಲ್ಲಾ ಕಡೆ ಮಾಡಿರುವುದು ಒಡೆದುಹೋಗಿರುವುದರಿಂದ ಅವರ ಮೇಲೆ ಇನ್ನೂ ಡ್ಯಾಮೇಜಸ್ ಕೇಳಲಿಲ್ಲ ಎಂದು ಹೇಳಿದಿರಿ. ಎರಡು ಲಕ್ಷ ಚಿಲ್ಲರೆ

†Indicates that the remarks or speeches have not been revised by the member concerned.

ಕೊಟ್ಟಿದ್ದೀರಿ. ಆದರೆ ಒಂದು ಹನಿ ನೀರು ಕೂಡ ವ್ಯವಸಾಯಕ್ಕೆ ಉಪಯೋಗವಾಗಿಲ್ಲ. ಇಷ್ಟೆಲ್ಲಾ ನಡೆದಿದ್ದರೂ ಕರ್ಣಾಟಕ ಟ್ರೇಡರ್ಸ್ ಎನ್ನತಕ್ಕ ಕಂಪನಿಯನ್ನು ಬ್ಲಾಕ್ ಲಿಸ್ಟ್ ಮಾಡಿ ಅವರು ಯಾವುದಾದರೂ ಕಂಟ್ರಾಕ್ಟ್ ಮಾಡುವುದನ್ನು ತಪ್ಪಿಸಲಿಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀಮತಿ ಬಸವರಾಜೇಶ್ವರಿ.—ಸ್ವಾಮಿ, ನಾನು ಆಗಲೇ ಹೇಳಿದ್ದೇನೆ ಪಾರ್ಟನರ್ಸ್ ಹೆಸರು ನನ್ನ ಮುಂದೆ ಇಲ್ಲ, ಅದು ಕನ್‌ಸ್ಟ್ರಕ್ಷನ್ ಕಂಪನಿ ಎನ್ನುವುದು ಮಾತ್ರ ಸ್ಪಷ್ಟವಾಗಿದೆ. ಆಗಲೇ ಏನು ಬ್ರೀಚ್ ಆಗಿದೆ ಆ ಪ್ರೊಪೋಷನ್ನನ್ನು ಕಂಟ್ರಾಕ್ಟರುಗಳು ಪುನಹ ಮಾಡಬೇಕು ಎಂದು ಚೀಫ್ ಇಂಜಿನೀಯರು ಹೇಳಿದ್ದಾರೆ. ಅಷ್ಟೇ ಅಲ್ಲ. ಇಷ್ಟೇ ನಿಗದಿಯಾದ ಸಮಯದಲ್ಲಿ ಆ ಕೆಲಸವನ್ನು ಪೂರ್ತಿಮಾಡಬೇಕೆಂದು ಹೇಳಿದ್ದಾರೆ. ಅವರಿಗೆ ಬ್ಲಾಕ್ ಲಿಸ್ಟ್ ಮಾಡಬೇಕೆಂದು ಹೇಳುವುದು ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ಇನ್ನೂ ಅನೇಕ ಕೆರೆಗಳನ್ನು ಇದರ ಜೊತೆಗೆ ಚೀಫ್ ಇಂಜಿನೀಯರು ಇನ್‌ಸ್ಪೆಕ್ಟ್ ಮಾಡಿದ್ದಾರೆ. ಅಲ್ಲಿ ಯಾವ ರೀತಿ ಫೇವರಿಟಿಜಂ ತೋರಿಸುತ್ತಾ ಇಲ್ಲ. ಎಲ್ಲಾ ಕೆರೆಗಳ ವಿಚಾರ ಯಾವರೀತಿ ಅಭಿಪ್ರಾಯಪಟ್ಟಿದ್ದಾರೋ ಅದೇ ರೀತಿ ಸೂಚನೆ ಕೊಟ್ಟಿದ್ದಾರೆ. ಅವರು ಮುಂದೆ ಆ ಸೂಚನೆ ಪ್ರಕಾರ ಕೆಲಸ ಮಾಡಲಿಲ್ಲ ಎಂದರೆ ಅವರ ಮೇಲೆ ಕ್ರಮ ತೆಗೆದು ಕೊಳ್ಳುತ್ತೇವೆ.

ಶ್ರೀ ಬಿ. ದೊಡ್ಡಬೋರೇಗೌಡ.—ಈ ಕೆರೆಯನ್ನು ಇಷ್ಟೇ ವರ್ಷಗಳ ಅವಧಿಯಲ್ಲಿ ಮಾಡ ಬೇಕಾಗುತ್ತದೆ ಎಂದು ಅಗ್ರಿಮೆಂಟ್ ಇದೆಯೇ ? ಆ ಅಗ್ರಿಮೆಂಟ್ ಪ್ರಕಾರ ಕೆಲಸವನ್ನು ಪೂರ್ತಿ ಯಾಗಿ ಮುಗಿಸಿದ್ದಾರೆಯೇ ?

ಶ್ರೀಮತಿ ಬಸವರಾಜೇಶ್ವರಿ.—ಮೊದಲು ಸುಮಾರು ಎರಡು ಲಕ್ಷ ನಾಲ್ಕು ಸಾವಿರ ರೂಪಾಯಿ ಗಳ ಅಂದಾಜು ಮಾಡಿದ್ದೆವು. ಆಗ ಟೆಂಡರ್ ಕರೆದರೆ ಯಾರೂ ಬರಲಿಲ್ಲ. ಪುನಃ 3.68 ಲಕ್ಷ ರೂಪಾ ಯಿಗಳಿಗೆ ಅಪ್ರೂವ್ ಮಾಡಿತ್ತು. ತದನಂತರ 11.95 ಪರ್ಸೆಂಟ್ ಇನ್‌ಕ್ರೀಸ್ ರೇಟ್ ಮೇಲೆ 1964–65 ನೇ ಇಸವಿಯಲ್ಲಿ ಕೆಲಸ ಎನ್‌ಟ್ರಸ್ಟ್ ಮಾಡಿದ್ದಾರೆ. ಅದು 31–12–1967ಕ್ಕೆ ಕಂಪ್ಲೀಟ್ ಮಾಡಬೇಕು ಎನ್ನುವ ಏಪರ್ಾಡು ಇತ್ತು.

ಶ್ರೀ ಎಂ. ಎಸ್. ಕೃಷ್ಣನ್.—''ಎ'' ನಲ್ಲಿ ಪ್ರಶ್ನೆ ಕೇಳಿರುವ ಕರ್ಣಾಟಕ ಕನ್‌ಸ್ಟ್ರಕ್ಷನ್ ಕಂಪನಿಗೂ ಕರ್ಣಾಟಕ ಟ್ರೇಡರ್ಸ್‌ಗೂ ಸಂಬಂಧ ಇದೆಯೇ, ಸಂಬಂಧ ಇದ್ದರೆ ಏನು ಸಂಬಂಧ ಮತ್ತು ಯಾವ ರೀತಿ ಸಂಬಂಧ ಎಂದು ಹೇಳುವುದಕ್ಕೆ ತಮ್ಮ ಕೈಯಲ್ಲಿ ಆಗುತ್ತದೆಯೇ ?

ಶ್ರೀಮತಿ ಬಸವರಾಜೇಶ್ವರಿ.—ಎರಡೂ ಒಂದೇ.

ಶ್ರೀ ಎಸ್. ಬಂಗಾರಪ್ಪ.—ಚಿತ್ರದುರ್ಗ ಡ್ರಿಸ್ಟ್ರಿಕ್ಟ್ ಶಿವಮೊಗ್ಗ ಸರ್ಕಲ್ಲಿನಲ್ಲಿ ಬರುತ್ತದೆ. ನನಗೆ ಗೊತ್ತಿರುವಹಾಗೆ ಈ ಕರ್ಣಾಟಕ ಟ್ರೇಡರ್ಸ್ ಅಂದರೆ ಗುರುನಾಥ ಮತ್ತು ರಾಜಶೇಖರ ರವರು ನಿಜಲಿಂಗಪ್ಪನವರಿಗೆ ಸಂಬಂಧಪಟ್ಟ ಜನ ಅವರು ಈ ಕಂಪನಿಯಲ್ಲಿ ಇದ್ದಾರೆ. ಈ ಕಂಪನಿಗೆ ಶಿವಮೊಗ್ಗ ಸರ್ಕಲ್ ಸೂಪರ್‌ಇಂಟೆಂಡಿಂಗ್ ಇಂಜಿನಿಯರವರು ಹಲವಾರು ಕಡೆ ದಂಡಹಾಕಿದ್ದಾರೆ. ಆ ಕಂಪನಿಯವರು ಸರಿಯಾಗಿ ಮಾಡದೆ ಅವರಿಗೆ ದಂಡ ಹಾಕಿರುವುದರಿಂದ, ಈಗಲಾದರೂ ಕೂಡ ಸರಕಾರದವರು ಆ ಕಂಪನಿಯನ್ನು ಸಿದ್ದಲಿಂಗಪ್ಪನವರು ಹೇಳಿದ ಹಾಗೆ ಬ್ಲಾಕ್ ಲಿಸ್ಟ್‌ನಲ್ಲಿ ಸೇರಿಸು ವುದಕ್ಕೆ ಪರಿಶೀಲನೆ ಮಾಡುತ್ತೀರಾ ?

ಶ್ರೀಮತಿ ಬಸವರಾಜೇಶ್ವರಿ.—ಹಲವಾರು ಕೇಸುಗಳಲ್ಲಿ ದಂಡ ಹಾಕಿದ್ದಾರೆ ಎನ್ನುವ ಮಾಹಿತಿ ಇಲ್ಲಿ ಇಲ್ಲ. ಈ ಕೇಸಿನ ಬಗ್ಗೆ ಹೇಳುವುದಾದರೆ ಅಕ್ಟೋಬರ್‌ನಲ್ಲಿ ಏನು ಬ್ರೀಚ್ ಆಗಿದೆ ಆ ಕೆಲಸವನ್ನು ನಿರ್ದಿಷ್ಟ ಸಮಯದಲ್ಲಿ ಮಾಡಿಕೊಡಬೇಕು ಎಂದು ಚೀಫ್ ಇಂಜಿನೀಯರವರು ಹೇಳಿರು ತ್ತಾರೆ. ಆ ಪಾರ್ಟಿ ಯಾರು ಏನು ಸಂಬಂಧ ಇರುತ್ತದೆ ಎನ್ನುವುದು ಇಲ್ಲಿ ಉತ್ತರದಲ್ಲಿ ಹೇಳಲಿಕ್ಕೆ ಬರುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಬ್ರೀಚ್ ಆಗಿರತಕ್ಕ ಎಲ್ಲಾ ಕೆರೆಗಳ ದುರಸ್ತಿಕೆಲಸವನ್ನು ಇದೇ ರೀತಿ ಕಂಟ್ರಾಕ್ಟ್‌ರಿಗೆ ಪುನಃ ಎನ್‌ಟ್ರಸ್ಟ್ ಮಾಡುತ್ತೀರಾ ?

ಉಪಾಧ್ಯಕ್ಷರು.—ಆ ಕೆಲಸಗಳು ಪೂರ್ತಿಯಾಗಿರಲಿಲ್ಲ ಅದಕ್ಕೋಸ್ಕರ ಅವರಿಗೇ ದುರಸ್ತಿ ಮಾಡಲು ಕೊಟ್ಟರು.

ಶ್ರೀಮತಿ ಬಸವರಾಜೇಶ್ವರಿ.—ಹೆಚ್ಚಿನ ಮಳೆ ಬಂದು ಬ್ರೀಚ್ ಆಗಿದೆ. ಆದುದರಿಂದ ಅದೇ ಕಂಟ್ರಾಕ್ಟ್‌ರು ಮಾಡಬೇಕೆಂದು ಹೇಳಿದ್ದಾರೆ. ಯಾವ ರೀತಿ ಉತ್ತಮಪಡಿಸಬೇಕು ಎಂದು ಹೇಳಿರುವುದರಿಂದ ಆ ಕಂಟ್ರಾಕ್ಟರು ಆ ರೀತಿ ಮಾಡಿದ್ದಾರೆ.

ಶ್ರೀ ಎಚ್. ಬಿ. ಜ್ವಾಲನಯ್ಯ.—ಇದರಲ್ಲಿ ಕೊನೆಯ ಪ್ರಶ್ನೆಗೆ ಉತ್ತರ ಕೊಡುತ್ತಾ, ಈ ಬ್ರೀಚ್‌ನ್ನು ಮುಚ್ಚುವುದಕ್ಕೆ ಮತ್ತೆ ಅವಕಾಶ ಮಾಡಿಕೊಟ್ಟಿದೆ ಎಂದು ಹೇಳಿದಿರಿ. ಕೆರೆ ಬ್ರೀಚ್ ಆಗಿರುವುದರಿಂದ ಆ ಕೆರೆಯ ಅಚ್ಚುಕಟ್ಟುದಾರರಿಗೆ ಆಗಿರತಕ್ಕ ನಷ್ಟವನ್ನು ಕಂಪನಿಯವರು ತುಂಬಿಕೊಡುವ ರೀತಿಯಲ್ಲಿ ಸರಕಾರ ಆದೇಶ ಕೊಡುತ್ತದೆಯೇ ?

ಶ್ರೀಮತಿ ಬಸವರಾಜೇಶ್ವರಿ.—ಆ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ—ಯಾರಾದರೂ ಕಂಟ್ರ್ಯಾಕ್ಟರು ಮಾಡಿದಂತಹ ಕೆಲಸದಲ್ಲಿ ಲೋಪದೋಷ ಕಂಡುಬಂದರೆ ಅವನ ಪೂರ್ವದ ಇತಿಹಾಸ ಏನೇನು ಇದೆ ಎಂಬುದನ್ನು ನೋಡಿ ಹೊಸದಾಗಿ ಕೆಲಸ ಕೊಡತಕ್ಕ ಸಂದರ್ಭದಲ್ಲಿ ಅವನ ಚರಿತ್ರೆ ನಮೂದು ಮಾಡುವುದು ಪದ್ಧತಿಯಲ್ಲವೇ ? ಅಥವಾ ಅವನಿಗೆ ಕೆಲಸ ಕೊಡುವಾಗ ಅವನಿಂದ ಠೇವಣಿ ಹೆಚ್ಚಾಗಿ ಪಡೆಯುವುದು ಪದ್ಧತಿಯಲ್ಲವೆ ? ಹಾಗಿದ್ದರೆ ಈ ಕರ್ನಾಟಕ ಟ್ರೇಡರ್ಸ್ ವಿಷಯದಲ್ಲಿ ಹಿಂದೆ ನಡೆದಿರತಕ್ಕ ವಿದ್ಯಮಾನವನ್ನು ತಿಳಿದು ಆ ರೀತಿ ಏನಾದರೂ ಇಂಜಿನಿಯರುಗಳು ಅಭಿಪ್ರಾಯ ಕೊಟ್ಟಿದ್ದಾರೆಯೇ ?

ಶ್ರೀಮತಿ ಬಸವರಾಜೇಶ್ವರಿ.—ಈ ಸಂದರ್ಭದಲ್ಲಿ ಅಂಥ ಅಭಿಪ್ರಾಯ ಕೊಟ್ಟಿಲ್ಲ, ಮಾನ್ಯ ಸದಸ್ಯರು ಆ ರೀತಿ ಅಭಿಪ್ರಾಯ ಪಡುತ್ತಾ ಇದ್ದಾರೆ, ಅದು ಅವರ ಒಂದು ಸಲಹೆ.

ಶ್ರೀ ಎಂ. ನಾಗಪ್ಪ.—10 ಅಥವಾ 11 ಪರ್ಸೆಂಟ್ ಓವರ್ ಅಂಡ್ ಎಬೌವ್ ದಿ ಎಸ್ಟಿಮೇಟ್ ಕೊಡಲಾಯಿತು ಎಂದು ಮಾನ್ಯ ಮಂತ್ರಿಗಳು ಹೇಳಿದರು. ಆ ರೀತಿಯಿಂದ ಕೊಡಬೇಕಾದರೆ ಇದೇ ಕಂಪೆನಿಯನ್ನು ಏಕೆ ಪ್ರಿಫರ್ ಮಾಡಲಾಯಿತು ? ಬೇರೆ ಟೆಂಡರರ್ಸ್ ಇಂತಹ ಕೆಲವು ವಿಶೇಷ ವಾದಂತಹ ಕೆಲಸಗಳಿಗೆ ಕೈಹಾಕದಂತೆ ಈ ಕಂಪನಿಯವರು ಮಾಡಿರತಕ್ಕದ್ದು ತಮ್ಮ ಗಮನಕ್ಕೆ ಬಂದಿದೆಯೇ ? ಹಾಗಿದ್ದರೆ ಸರ್ಕಾರದವರು ಸ್ವತಃ ವರ್ಕ್ ಆರ್ಡರ್ ಬೇಸಿಸ್ ಮೇಲೆ ಕೆಲಸ ಕಾರ್ಯಗಳನ್ನು ಏಕೆ ಮಾಡಲಿಲ್ಲ ಎಂಬುದನ್ನು ತಿಳಿಸಬೇಕು.

ಶ್ರೀಮತಿ ಬಸವರಾಜೇಶ್ವರಿ.—ಮೊದಲೇ ಹೇಳಿವ್ವೀನೆ ಕಂಟ್ರಾಕ್ಟರಗಳು ಯಾರೂ ಬರಲಲ್ಲ ಅಂತ. ಕೊನೆಗೆ ಈ ಕಂಪನಿಯವರಿಗೆ ಈ ಕೆಲಸವನ್ನು ವಹಿಸಿದ್ದಾರೆ ಬೇರೆಯವರು ಮುಂದೆ ಬರದಂತೆ ಮಾಡಿದ್ದಾರೆ ಅಂತ ಅನ್ನುವಂತಹ ವಿಷಯ ನನ್ನ ಮುಂದೆ ಇಲ್ಲ.

ಶ್ರೀ ಜಿ. ದುಗ್ಗಪ್ಪ.—ಕರ್ನಾಟಕ ಟ್ರೇಡರ್ಸ್ ಬಗ್ಗೆ ಶಿವಮೊಗ್ಗ ಸರ್ಕಲ್ ಸೂಪರಿಂಟೆಂಡಿಂಗ್ ಇಂಜಿನಿಯರು ಏನು ಅಭಿಪ್ರಾಯಪಟ್ಟಿದ್ದಾರೆ ಎಂಬುದನ್ನು ತಿಳಿಸುವುದಕ್ಕಾಗುತ್ತದೆಯೇ ?

ಶ್ರೀಮತಿ ಬಸವರಾಜೇಶ್ವರಿ.—ಆ ವಿಷಯ ನನ್ನ ಮುಂದೆ ಇಲ್ಲ. ಕೆರೆ ಬಗ್ಗೆ ಏನು ಹೇಳಿದ್ದಾರೆ ಎಂಬುದನ್ನು ಹೇಳಿದ್ದೇನೆ.

Sri D. B. KALMANKAR.—In what year the breach was caused and how long the Government is going to take to recover the loss ?

ಶ್ರೀಮತಿ ಬಸವರಾಜೇಶ್ವರಿ.—ಮಾನ್ಯ ಸದಸ್ಯರು ಸಭೆಯಲ್ಲಿ ಇರಲಿಲ್ಲ ಅಂತ ಕಾಣುತ್ತದೆ. ಇದು 1969 ರಲ್ಲಿ ಬ್ರೀಚ್ ಆಗಿದೆ, ಈಗ ಫಿಲ್‌ಅಪ್ ಮಾಡತಕ್ಕ ಕೆಲಸ ನಡೆದಿದೆ ಎಂದು ಹೇಳಿದೆ.

Sri H. SIDDAVEERAPPA.—I have received a letter from the Deputy Secretary to Government, P.W.D. (C and B) wherein by way of additional information this information is given: "Partners of Messrs. Karnatak Traders, P.W.D. Contractors are Basappa, Viswanath, D. Chandrasekhar and N. Rajasekhar".

With regard to Muthaganahalli (Molakalmuru Taluk), Rs. 3,68,090 is the estimated cost of the work under progress. I would like to know from the Minister whether the figure she has now given is correct or whether she would like to get it verified. There are 19 works standing in their names and I would like to know whether this is the fate of all the 19 works or whether this is the fate of this work only.

ಶ್ರೀಮತಿ ಬಸವರಾಜೇಶ್ವರಿ.—ನನ್ನಲ್ಲಿರತಕ್ಕ ಸಮಾಚಾರದ ಪ್ರಕಾರ 3 ಲಕ್ಷದ 68 ಸಾವಿರ ರೂಪಾಯಿ ಅಂತ ಇದೆ. ಅದನ್ನು ಹೇಳಿದ್ದೇನೆ. ಬಾಕಿ ಕೇನಸ್‌ನ ಸಮಾಚಾರ ನನ್ನ ಹತ್ತಿರ ಇಲ್ಲ.